ಹೋಗಬೇಕು. ಇಲ್ಲದಿದ್ದರೆ, ಮಕ್ಕಳು ಹಾಗೂ ಪೋಷಕರು ಇಬ್ಬರಿಗೂ ಇದರಿಂದ ತೊಂದರೆ ಕಟ್ಟಿಟ್ಟ ಬುತ್ತಿ.

ನನ್ನ ಪರಿಚಿತರೊಬ್ಬರು ಮಕ್ಕಳಿಂದ ಪೋಷಕರಿಗಾಗುವ ಪ್ರತ್ಯೇಕತೆಯನ್ನು ನಿಭಾಯಿಸಿದ ರೀತಿ ನಿಜಕ್ಕೂ ಶ್ಲಾಘನೀಯ. ಅವರಿದ್ದ ಊರು ಇತ್ತ ಹಳ್ಳಿಯೂ ಅಲ್ಲದ, ಅತ್ತ ನಗರವೂ ಅಲ್ಲದ ಊರು. ಹಾಗಾಗಿ ಅವರ ಮಗ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಹೋಗಲೇಬೇಕಾದ ಪರಿಸ್ಥಿತಿ. ಇದನ್ನರಿತ ಪೋಷಕರು ಆತ 10ನೆ ತರಗತಿಯಲ್ಲಿದ್ದಾಗಲೇ, ಆತನ ಜೊತೆ ಮುಂದಾಗುವ ಅಗಲಿಕೆಗೆ ಮಾನಸಿಕವಾಗಿ ತಯಾರಾಗುತ್ತಿದ್ದರು. ಅವರ ಪ್ರಕಾರ, ಹೆಚ್ಚಿನ ವಿದ್ಯಾಭ್ಯಾಸದ ನಂತರ ನೌಕರಿ, ನೌಕರಿಯ ನಂತರ ಆತನ ಮದುವೆ, ಸಂಸಾರ, ಹೀಗಾಗಿ ಅವರು ವಸ್ತುಸ್ಥಿತಿಯನ್ನು ತಿಳಿದು, ಮಗನಿಂದಾಗುವ ಅಗಲಿಕೆಯನ್ನು ಅರಗಿಸಿಕೊಂಡಿದ್ದರು! ಇವರಂತೆಯೇ ಎಲ್ಲಾ ಪೋಷಕರೂ ವಾಸ್ತವವನ್ನು ಒಪ್ಪಿಕೊಂಡರೆ, ಅಗಲಿಕೆಯಿಂದಾಗುವ ನೋವು, ನೋವಾಗಿರುವುದಿಲ್ಲ. ಹಾಗೆಂದು ಪೋಷಕರಿಗಾಗಲೀ ಅಥವಾ ಮಕ್ಕಳಿಗಾಗಲೀ ಪರಸ್ಪರರ ಮೇಲಿರುವ ಪ್ರೀತಿ ಎಂದಿಗೂ ಕಡಿಮೆಯಾಗುವುದಿಲ್ಲ.

ಮಕ್ಕಳು ಬೆಳೆಯುತ್ತಿರುವಂತೆಯೇ ತಮ್ಮದೇ ಆದ ಲೋಕದಲ್ಲಿರಲು ಬಯಸುತ್ತಾರೆ. ಅದು ಸಹಜ ಕೂಡಾ. ಎಷ್ಟೋ ಜನ ಪೋಷಕರು ತಮ್ಮ ಮಕ್ಕಳು ತಮ್ಮೊಂದಿಗೆ ಯಾವ ವಿಷಯವನ್ನೂ ಹಂಚಿಕೊಳ್ಳುವುದಿಲ್ಲ ಎಂದು ಕೊರಗುತ್ತಾರೆ. ಕೆಲವು ಮಕ್ಕಳಿಗೆ ಬೆಳೆಯುವ ವಯಸ್ಸಿನಲ್ಲಿ, ಪೋಷಕರೊಂದಿಗೆ 'ಶೇರ್' ಮಾಡುತ್ತಿದ್ದ ಎಷ್ಟೋ ವಿಷಯಗಳನ್ನು ಸ್ನೇಹಿತರ ಜೊತೆ ಹಂಚಿಕೊಳ್ಳೋಣವೆಂದಿನಿಸುತ್ತದೆ. ಸಮವಯಸ್ಕರೊಡನೆ ಹೆಚ್ಚು ಸಮಯವನ್ನು ಕಳೆಯಲು ಇಚ್ಛಿಸುವುದು ಹದಿಹರೆಯದಲ್ಲಿ ಸ್ವಾಭಾವಿಕ. ಮಕ್ಕಳಿದ್ದಾಗ, ಎಲ್ಲಾ ವಿಷಯವನ್ನೂ ಪೋಷಕರ ಜೊತೆ 'ಶೇರ್' ಮಾಡುತ್ತಿದ್ದವರು, ಹದಿಹರೆಯಕ್ಕೆ ಕಾಲಿಟ್ಟ ತಕ್ಷಣ ಹೀಗೇಕೆ? ಎನ್ನುವ ಪ್ರಶ್ನೆ ಬಹಳಷ್ಟು ಪೋಷಕರನ್ನು ಕಾಡುತ್ತದೆ.

ನಾವೂ ಒಮ್ಮೆ ಈ ಹಂತವನ್ನು ದಾಟಿ ಬಂದವರೇ! ಪೋಷಕರೇ, ಒಮ್ಮೆ ಕಳೆದು ಹೋದ ಜೀವನದತ್ತ ಹಿಂದಿರುಗಿ ನೋಡಿ. ನಮ್ಮ ಪೋಷಕರು ಕೇಳುತ್ತಿದ್ದ ಪ್ರಶ್ನೆಗಳು ಕೆಲವೊಮ್ಮೆ ನಮಗೂ ಕಿರಿಕಿರಿಯನ್ನುಂಟು ಮಾಡುತ್ತಿರಲಿಲ್ಲವೇ? ನಾವು ಪೋಷಕರಾದ ನಂತರ ನಮ್ಮ ಕಳೆದು ಹೋದ ಜೀವನವನ್ನು ಮರೆತೇ ಬಿಡುತ್ತೇವೆ. ನಮ್ಮ ಪೋಷಕರಿಗೆ ಹೋಲಿಸಿದರೆ, ಈಗಿನ ಪೋಷಕರಿಗೆ ಮಕ್ಕಳ ಮೇಲೆ ಅತಿಯಾದ ಸ್ವಾಮ್ಯ ಪ್ರವೃತ್ತಿ (ಪೊಸೆಸಿವ್‌ನೆಸ್) ಇರುವುದು ಎಲ್ಲರಿಗೂ ತಿಳಿದ ವಿಷಯ. ಕೆಲವು ಪೋಷಕರು ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಮಕ್ಕಳ ಮೇಲೆ ಗೂಢಚಾರಿಕೆಯನ್ನು ನಡೆಸುತ್ತಾರೆ. ಈ ಪ್ರವೃತ್ತಿ ಯಾರಿಗೂ ಇಷ್ಟವಾಗುವುದಿಲ್ಲವೆಂದು ತಿಳಿದೂ ಈ ಕೆಲಸವನ್ನು ಮಾಡಲು ಹಿಂಜರಿಯುವುದಿಲ್ಲ. ಇಂಥ ಪೋಷಕರಿಗೆ ಮಕ್ಕಳ ಮೇಲಿನ ಅತಿಯಾದ ಕಾಳಜಿ ಈ ರೀತಿ ಮಾಡಿಸುತ್ತದೆಯೇ ಹೊರತು ಬೇರೇನೂ ಅಲ್ಲ. ಪ್ರೀತಿಯೇ ಆದರೂ ಅದು ಬಂಧನವಾಗಬಾರದು.

ಕೆಲವು ಪೋಷಕರ ಅತಿಯಾದ ಪ್ರೀತಿಯಿಂದ ಮಕ್ಕಳು ಆಲಸಿಗಳಾಗುತ್ತಿದ್ದಾರೆ. ಎಷ್ಟೋ ಮಕ್ಕಳಿಗೆ ಮನೆಯಲ್ಲಿ ತಮ್ಮ ವಸ್ತುಗಳು ಎಲ್ಲಿವೆ ಎಂದು ಗೊತ್ತಿರುವುದಿಲ್ಲ! ಎಲ್ಲಕ್ಕೂ ಪೋಷಕರ ಮೇಲೆ ಅವಲಂಬಿತರಾಗಿರುತ್ತಾರೆ. ಹದಿಹರೆಯಕ್ಕೆ ಬಂದರೂ ಕೆಲವು ಮಕ್ಕಳಿಗೆ ಅಂಗಡಿಗೆ ಹೋಗಿ ಸಾಮಾನು ಖರೀದಿಸಲು ಬರುವುದಿಲ್ಲ! ಅಷ್ಟರಮಟ್ಟಿಗೆ ಇಂದಿನ ಪೋಷಕರು ಮಕ್ಕಳನ್ನು ಮುದ್ದಿನಿಂದ ಬೆಳೆಸಿರುತ್ತಾರೆ. ಇಂಥ ಮಕ್ಕಳು, ಒಮ್ಮಿಂದೊಮ್ಮೆಲೇ ಹೆಚ್ಚಿನ ವಿದ್ಯಾಭ್ಯಾಸಕ್ಕೋ ಅಥವಾ ಕೆಲಸಕ್ಕೋ ಪೋಷಕರನ್ನು ಬಿಟ್ಟು ಇರಬೇಕಾದ ಸಂದರ್ಭ ಬಂದರೆ ಹೇಗಿರುತ್ತದೆ? ಇಂತಹ ಸನ್ನಿವೇಶಗಳಲ್ಲಿ ಪರದಾಡುವಂತಾಗುವ ಮಕ್ಕಳ ಚಿತ್ರಣ ಕಲ್ಪಿಸಿಕೊಳ್ಳಿ. ಆಗ ನೀವು ಇಷ್ಟು ವರ್ಷಗಳ ಕಾಲ ಕೊಟ್ಟ 'ಸುಖ ಸೌಲಭ್ಯ' (ಕಂಫರ್ಟ್ ಜೋನ್)ಗಳು ಕೆಲಸಕ್ಕೆ ಬರುವುದಿಲ್ಲ. ಕೆಲಸ ಕಲಿಸಿಲ್ಲವೆಂದು ಅನ್ಯರಿಂದ ಪೋಷಕರಿಗೆ ನಿಂದನೆ ವೃಥಾ ತಪ್ಪಿದ್ದಲ್ಲ. ಎಷ್ಟೋ ಮನೆಗಳಲ್ಲಿ ಮಗನಿಗೆ ಕೆಲಸ ಕಲಿಸಿಲ್ಲವೆಂದು ಸೊಸೆ ಹಾಗೂ ಮಗಳಿಗೆ ಕೆಲಸ ಕಲಿಸಿಲ್ಲವೆಂದು ಅಳಿಯ, ನಿತ್ಯವೂ ಗೊಣಗುವುದನ್ನು ಕೇಳಿದ್ದೇವೆ. ಬಹಳಷ್ಟು ಮನೆಗಳಲ್ಲಿ ಕದನದ ನಾಂದಿಯೇ ಚಿಕ್ಕ ವಯಸ್ಸಿನಲ್ಲಿ ಅತಿಯಾಗಿ ಸಿಕ್ಕ ಈ 'ಕಂಫರ್ಟ್ ಜೋನ್.'

ಇದು ಅತೀ ಮುದ್ದಿನಿಂದ ಬೆಳೆದ ಮಕ್ಕಳ ಕತೆಯಾದರೆ, ಸ್ವಾಮ್ಯ ಪ್ರವೃತ್ತಿಯುಳ್ಳ ಪೋಷಕರ ಕತೆ ಇನ್ನೊಂದು ರೀತಿಯಾದುದು. ಮಕ್ಕಳ ಎಲ್ಲಾ ಅವಶ್ಯಕತೆಗಳನ್ನೂ ಪ್ರೀತಿಯಿಂದಲೇ ಪೂರೈಸುವ ಪೋಷಕರು, ಮಕ್ಕಳು ದೂರವಾದೊಡನೆ ಖಿನ್ನತೆಗೊಳಪಡುತ್ತಾರೆ. ಮಕ್ಕಳೂ ಕೂಡಾ ದೊಡ್ಡವರಾಗಿದ್ದಾರೆ ಎನ್ನುವುದು ನೆನಪಿಗೇ ಬರುವುದಿಲ್ಲ! ಮಕ್ಕಳಿಗೆ ನಮ್ಮ ಮೇಲೆ ಪ್ರೀತಿ ಕಡಿಮೆಯಾಗಿದೆಯೇನೋ ಎನ್ನುವ ಸಂಶಯ ಕಾಡತೊಡಗುತ್ತದೆ. ಇದು ಸ್ವಾಭಾವಿಕವಾಗಿ ಮಕ್ಕಳ ಮದುವೆಯ ನಂತರ ಉಲ್ಬಣಗೊಳ್ಳುತ್ತದೆ. ಮಗನಾದರೆ, ಹೆಚ್ಚಾಗಿ ಸೊಸೆಗೇ ಅಂಟಿಕೊಂಡಿರುತ್ತಾನೆ ಎಂಬ ದೂರು. ಮಗಳಾದರೆ, ಗಂಡನ ಮನೆಯೇ ಆಕೆಗೆ ಸರ್ವಸ್ವವಾಗಿದೆ ಎನ್ನುವ ಅಳಲು. ಈ ರೀತಿ ಕೊರಗುವ ಪೋಷಕರೂ ಸಹಾ ಈ ಮಜಲುಗಳನ್ನು ದಾಟಿ ಬಂದವರೇ! ಆದರೆ ಆಗ ಅರಿವಿಗೇ ಬರದ ಹಲವು ಸಂಗತಿಗಳು ಈಗ ಬೃಹದಾಕಾರವಾಗಿ ಕಣ್ಣಿಗೆ ಕಾಣತೊಡಗುತ್ತವೆ. ಮಕ್ಕಳು ತಮ್ಮೊಂದಿಗೆ ಹೆಚ್ಚಿನ ಸಮಯವನ್ನು ವ್ಯಯಿಸುತ್ತಿಲ್ಲವೆಂದು ವಿನಾ ಕಾರಣ ಪೋಷಕರು ಆಕ್ರೋಶಕ್ಕೆ ಒಳಗಾಗುತ್ತಾರೆ.

ಮಕ್ಕಳು ದೊಡ್ಡವರಾಗುತ್ತಿದ್ದಂತೆಯೇ ಅವರಿಗೂ ಅವರದೇ ಆದ 'ಸ್ಥಳಾವಕಾಶ' ಬೇಕು ಎನ್ನುವ ಸತ್ಯವನ್ನು ಅರಿಯದೇ ಪೋಷಕರು ತಮ್ಮ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುತ್ತಾರೆ. ಹಾಗಾದರೆ ಇದಕ್ಕೆ ಪರಿಹಾರವೇನು? ಮಕ್ಕಳು ದೊಡ್ಡವರಾದ ಮೇಲೆ ದೂರವಾಗುತ್ತಾರೆಂದು, ಮೊದಲಿನಿಂದಲೂ ಅವರಿಂದ ದೂರವಿರಬೇಕೇ? ಖಂಡಿತಾ ಇಲ್ಲ. ಹುಟ್ಟಿದಾಗಿನಿಂದ ಮಕ್ಕಳಿಗೆ ಪೋಷಕರ ಪ್ರೀತಿ, ಸಹಾಯ ಬೇಕೇ ಬೇಕು. ಆದರೆ ಮಕ್ಕಳು ಬೆಳೆಯತೊಡಗಿದಂತೆ, ಅವರನ್ನು ಸ್ವತಂತ್ರ ಜೀವಿಗಳನ್ನಾಗಿ ಬೆಳೆಸುವುದೂ ಕೂಡಾ ಪೋಷಕರ ಕರ್ತವ್ಯ. ಮಕ್ಕಳು ಎಷ್ಟು ದೊಡ್ಡವರಾದರೂ ಪೋಷಕರಿಗೆ ಅವರು ಮಕ್ಕಳೇ. 'ಅಯ್ಯೋ ಪಾಪ, ಮಗು ಕಷ್ಟ ಪಡುತ್ತಿದೆ', ಎಂದು ಅವರ ಕೆಲಸಗಳನ್ನು ಮಾಡಲು ಹೋಗಬೇಡಿ. ಆಯಾ ವಯಸ್ಸಿಗೆ ಅನುಗುಣವಾಗಿ ಅವರವರು ಮಾಡುವ ಕೆಲಸಗಳನ್ನು ಅವರವರೇ ಮಾಡಿದರೆ, ಮಕ್ಕಳು ಹಾಗೂ ಪೋಷಕರು ಇಬ್ಬರಿಗೂ ಅನುಕೂಲ. ಕೆಲವು ಕೆಲಸಗಳು ಒಂದೇ ಬಾರಿಗೆ ಸರಿಯಾಗಿ ಮಾಡಲು ಬರುವುದಿಲ್ಲ. ಮಕ್ಕಳಿಗೆ ಆ ಕೆಲಸಗಳನ್ನು ಕಲಿಯಲು ಸಮಯ ಕೊಡಿ, ಕಲಿಯುತ್ತಾರೆ.

ಎಲ್ಲಾ ಪೋಷಕರಿಗೂ ಮಕ್ಕಳು ವಿದ್ಯಾವಂತರಾಗಿ ಒಳ್ಳೆಯ ಕೆಲಸಕ್ಕೆ ಸೇರಲಿ ಎಂಬ ಆಸೆ ಇರುತ್ತದೆ. ಅಂದ ಮೇಲೆ ಕೆಲಸವಿದ್ದ ಕಡೆ ಹೋಗಲೇ ಬೇಕಲ್ಲವೇ? ಈ ತೆರನಾದ ಅಗಲಿಕೆ ಒಂದು ರೀತಿಯಾದ ಸಿಹಿಯಾದ ನೋವು. ಮಕ್ಕಳ ಅಭ್ಯುದಯಕ್ಕೆ ಸಂತೋಷವಾದರೆ, ಅವರು ದೂರಾಗುತ್ತಿರುವುದು ನೋವನ್ನು ತರುತ್ತದೆ. ಒಂದು ಹಂತದಲ್ಲಿ ಮಕ್ಕಳನ್ನು ಶಾಲೆಗೆ ಬಿಡುವುದು, ಕರೆತರುವುದು, ಇದರಲ್ಲೇ ಹೆಚ್ಚಿನ ತಾಯಂದಿರ ಸಮಯ ಕಳೆದು ಹೋಗುತ್ತದೆ. ನಂತರ ಮಕ್ಕಳು ಸ್ವತಂತ್ರರಾಗಿ ಓಡಾಡಲು ಶುರು ಮಾಡಿದ ತಕ್ಷಣ ಪೋಷಕರಿಗೆ ಆ ಸಮಯ, ಕೆಲಕಾಲ ಕಷ್ಟವೆನಿಸಬಹುದು. ಆ ಕಾಲವನ್ನು ನಿಮಗಾಗಿ ಬಳಸಿಕೊಳ್ಳಿ. ನಿಮಗಿಷ್ಟವಾದ ಕೆಲಸವನ್ನು ಮಾಡುವ ಸಮಯವದು. ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಿ. ನಾನು ಕಂಡಂತೆ ಎಷ್ಟೋ ಜನ ಪೋಷಕರು ಮಕ್ಕಳು ದೊಡ್ಡವರಾದ ಮೇಲೆ ತಮ್ಮ ಕನಸನ್ನು ನನಸಾಗಿಸಿಕೊಂಡಿದ್ದಾರೆ. ಯಾವ ಕೆಲಸಕ್ಕೂ, ಹವ್ಯಾಸಕ್ಕೂ ವಯಸ್ಸಿನ ಮಿತಿಯಿಲ್ಲ. ಸಮಾಜ ಮಾಡಿರುವ ಕಾಲ್ಪನಿಕ ನಿಯಮಗಳಿಗೆ ಕಟ್ಟುಬಿದ್ದು ನಿಮ್ಮಾಸೆಗಳಿಗೆ ಸೀಮೆಯನ್ನು ಹಾಕಿಕೊಳ್ಳಬೇಡಿ. ನಮ್ಮ ಗುರಿ ನಮ್ಮಿಷ್ಟದ ಪ್ರಕಾರ ಮಾತ್ರ ಇರಬೇಕು.

ಈ ವಿಷಯದಲ್ಲಿ ಮಕ್ಕಳ ಜವಾಬ್ದಾರಿಯೂ ಹೆಚ್ಚು ಇದೆ. ಚಿಕ್ಕಂದಿನಿಂದ ನಿಮ್ಮನ್ನು ಮುದ್ದಿನಿಂದ ಬೆಳೆಸಿದ ಪೋಷಕರು ಕೇಳುವ ಪ್ರಶ್ನೆಗಳಿಗೆ ತಾಳ್ಮೆಯಿಂದ ನಯವಾಗಿ ಉತ್ತರಿಸಿ. ಅವರು ಬಯಸುವುದು ನಿಮ್ಮ ಶ್ರೇಯಸ್ಸನ್ನು ಮಾತ್ರ. ನೀವು ವಿದ್ಯಾಭ್ಯಾಸದಲ್ಲಿ ನಿರತರಾಗಿರಬಹುದು ಅಥವಾ ಬಿಡುವಿಲ್ಲದ ಕೆಲಸದಲ್ಲಿ ಮಗ್ನರಾಗಿರಬಹುದು. ಕೊಂಚ ಸಮಯವನ್ನು ನಿಮ್ಮನ್ನು ಪೋಷಿಸಿ ಬೆಳೆಸಿದ ಪೋಷಕರಿಗಾಗಿ ಇಡಿ. ನಿಮ್ಮಿಂದ ದೂರವಿರುವ ಅವರು ನಿರೀಕ್ಷಿಸುವುದು ನಿಮ್ಮ ಕ್ಷೇಮ ಸಮಾಚಾರ ಮಾತ್ರ! ಈಗಂತೂ ಎಲೆಕ್ಟ್ರಾನಿಕ್ ಯುಗ. ಎಲ್ಲರ ಬಳಿಯಲ್ಲಿಯೂ ಮೊಬೈಲ್ ಫೋನುಗಳಿರುತ್ತವೆ. ಆಗಾಗ್ಗೆ ನಿಮ್ಮ ಪೋಷಕರ ಜೊತೆ ಮಾತನಾಡಿ, ಅವರಿಗೆ ಒಂಟಿತನ ಕಾಡದಂತೆ ನೋಡಿಕೊಳ್ಳಿ. ಇದು ನಿಮ್ಮ ಕರ್ತವ್ಯ ಕೂಡಾ ಹೌದು.